# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹಳೆಯ ಮತ್ತು ದುರಸ್ತಿ ಸಾಧ್ಯವಿರದ ದೋಣಿಗಳ ಬದಲಿಗೆ ಹೊಸ ದೋಣಿ ನಿರ್ಮಿಸಲು ಸಾಧ್ಯತಾ ಪತ್ರ ನೀಡುವ ಕುರಿತಂತೆ ಮಾರ್ಗಸೂಚಿಗಳ ಬಗ್ಗೆ.

ಓದಲಾಗಿದೆ:- (1) ದಿನಾಂಕ: 08-04-2015 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
(2) ಪತ್ರ ಸಂಖ್ಯೆ: ಮೀನಿ/02/ಎಂಇಎಫ್/2016, ದಿನಾಂಕ: 05-02-2016.

4 MAY 2016
MEF

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 08-04-2015 ರ ನಡವಳಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಕರಾವಳಿಯ ಮಂತ್ರಿಗಳು, ಶಾಸಕರು ಮತ್ತು ಮೀನುಗಾರರ ಪ್ರತಿನಿಧಿಗಳೊಂದಿಗೆ ನಡೆಸಿದ ಸಭೆಯಲ್ಲಿ ಮರದಿಂದ ತಯಾರಿಸಲ್ಪಟ್ಟ ಹಳೆಯದಾಗಿರುವ ಮತ್ತು ದುರಸ್ತಿಪಡಿಸಲು ಅವಶ್ಯವಾದ ದೋಣಿಗಳ ನೋಂದಣಿ ದಾಖಲೆಯನ್ನು ಹಿಂತಿರುಗಿಸುವ ಮೀನುಗಾರರಿಗೆ ಸ್ಟೀಲ್ ದೋಣಿಗಳನ್ನು ನಿರ್ಮಿಸಲು ಇಲಾಖೆಯಿಂದ ಅನುಮತಿ ನೀಡುವುದು ಎಂದು ನಿರ್ಣಯಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಹಳೆಯ ಮೀನುಗಾರಿಕೆ ದೋಣಿಗಳ ಬದಲಿಗೆ ಹೊಸ ದೋಣಿ ನಿರ್ಮಿಸಿದ್ದಲ್ಲಿ ದೋಣಿಗಳ ಸಂಖ್ಯೆಯಲ್ಲಿ ಯಾವುದೇ ಹೆಚ್ಚಳವಾಗುವುದಿಲ್ಲ. ಆದರೆ, ದೋಣಿಗಳನ್ನು ನಿರ್ಮಿಸುವಾಗ ಮೀನುಗಾರರು ಹೆಚ್ಚಿನ ಗಾತ್ರದ ಹಾಗೂ ಅಧಿಕ ಅಶ್ವಶಕ್ತಿಯ ಇಂಜಿನ್‌ಗಳನ್ನು ಅಳವಡಿಸಿದ ದೋಣಿಗಳನ್ನು ನಿರ್ಮಿಸುವುದರಿಂದ, ರಾಜ್ಯದ ಒಟ್ಟಾರೆ ಮೀನುಗಾರಿಕೆ ಸಾಮರ್ಥ್ಯದಲ್ಲಿ ಹೆಚ್ಚಳವಾಗುವುದು. ಆದ್ದರಿಂದ, ಯಾವುದೇ ಕಾರಣಕ್ಕೆ ಹಳೆಯ ದುರಸ್ತಿ ಸಾಧ್ಯವಿಲ್ಲದ ದೋಣಿಗಳ ಬದಲಿಗೆ ಹೊಸ ಯಾಂತ್ರಿಕ ದೋಣಿಯನ್ನು ನಿರ್ಮಿಸಲು ಕೆಲವೊಂದು ಮಾರ್ಗಸೂಚಿಯನ್ನು ಆಧರಿಸಿ ಸಾಧ್ಯತಾ ಪತ್ರ ನೀಡಲು ಅನುಮತಿ ನೀಡುವಂತೆ ಕೋರಿರುತ್ತಾರೆ.

-2-

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 23 ಮೀಇಯೋ 2016 (ಭಾಗ-1), ಬೆಂಗಳೂರು ದಿನಾಂಕ: 03-05-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಳೆಯ ದುರಸ್ತಿ ಸಾಧ್ಯವಿಲ್ಲದ ದೋಣಿಗಳ ಬದಲಿಗೆ ಹೊಸ ಯಾಂತ್ರಿಕ ದೋಣಿಯನ್ನು ನಿರ್ಮಿಸಲು ಈ ಕೆಳಕಂಡ ಮಾರ್ಗಸೂಚಿಯನ್ನು ಆಧರಿಸಿ ಸಾಧ್ಯತಾ ಪತ್ರ ನೀಡಲು ಅನುಮತಿ ನೀಡಿದೆ.

1) ದುರಸ್ತಿಯಾಗದ / ಅಪಘಾತಕ್ಕೀಡಾದ ದೋಣಿಯು ಇಲಾಖೆಯಲ್ಲಿ ಈ ಮೊದಲು ನೋಂದಾಯಿತ ಯಾಂತ್ರೀಕ ದೋಣಿಯಾಗಿರತಕ್ಕದ್ದು.

2) ಅಪಘಾತಕ್ಕೀಡಾದ ಯಾಂತ್ರೀಕ ದೋಣಿಯನ್ನು ಯಾವುದೇ ಕಾರಣಕ್ಕೆ ಮರುನಿರ್ಮಿಸಲು ಸಾಧ್ಯವಿಲ್ಲವೆಂದು Insurance ಸಂಸ್ಥೆಯ ದೃಢೀಕರಣ, ಸ್ಥಳೀಯ authorised Fisheries Officer ರವರ ಖುದ್ದು ಪರಿಶೀಲನಾ ವರದಿಯೊಂದಿಗೆ ಅಪಘಾತವಾದ ದಿನಾಂಕದಿಂದ 1 ವರ್ಷದೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

3) ನಿಷ್ಕ್ರೀಯಗೊಳಿಸಲು ಅನುಮತಿ ನೀಡಬಹುದಾದ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳನ್ನು ನಿರ್ಮಿಸಲು ಉಪಯೋಗಿಸಿದ ವಸ್ತುವನ್ನು ಆಧರಿಸಿ ದೋಣಿ ನಿರ್ಮಾಣದ ವರ್ಷದಿಂದ ಕನಿಷ್ಟ ಅವಧಿಯನ್ನು ಈ ಕೆಳಗಿನಂತೆ ನಿಗದಿಗೊಳಿಸುವುದು. "ಅಪಘಾತಕ್ಕೆ" ಸದರಿ ಷರತ್ತು ಅನ್ವಯಿಸುವುದಿಲ್ಲ.

| | |
|---|---|
| ಮರ | – 15 ವರ್ಷಗಳು |
| ಸ್ಟೀಲ್ / ಫೈಬರ್‌ಗ್ಲಾಸ್ | – 10 ವರ್ಷಗಳು |

4) ಸಂಬಂಧಿಸಿದ ಆಥರೈಸ್ಡ್ ಅಧಿಕಾರಿಯು ದೋಣಿ ಪರಿಶೀಲನೆ ಮಾಡಿ ದೋಣಿ ಹಾಗೂ ಇಂಜಿನ್‌ನ ದುರಸ್ತಿ ಸಾಧ್ಯವಿಲ್ಲವೆಂದು ದೃಢೀಕರಿಸಿರ ತಕ್ಕದ್ದು. ಈ ಬಗ್ಗೆ ಛಾಯಾಚಿತ್ರದೊಂದಿಗೆ ವಿವರವಾದ ಪರಿಶೀಲನಾ ವರದಿ ಸಲ್ಲಿಸುವುದು. ಆಥರೈಸ್ಡ್ ಅಧಿಕಾರಿಯ ಪರಿಶೀಲನಾ ವರದಿ ಯನ್ನು ಮೀನುಗಾರಿಕೆ ಉಪ ನಿರ್ದೇಶಕರು ಪರಿಶೀಲನೆ ಮಾಡಿ ಸದರಿ ದೋಣಿಯ ದುರಸ್ತಿ ಸಾಧ್ಯವಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು ಹಾಗೂ ತದನಂತರವೇ ಸಾಧ್ಯತಾ ಪತ್ರ ನೀಡಲು ಕ್ರಮವಹಿಸುವುದು.

-3-

5) ಹೊಸ ದೋಣಿ ನಿರ್ಮಾಣಕ್ಕೆ ಅನುಮತಿ ನೀಡುವ ಮೊದಲು ಹಳೆಯ ದೋಣಿಯ ಮೂಲ ನೋಂದಣಿಯನ್ನು ರದ್ದುಗೊಳಿಸುವುದು. ಮೀನುಗಾರಿಕೆ ಪರವಾನಗಿ, ಹಳೆ ಯಾಂತ್ರೀಕ ದೋಣಿಗೆ ಪಡೆದ ಡೀಜಲ್ ಪಾಸ್ ಪುಸ್ತಕ, ನೋಂದಣಿ ದೃಢೀಕರಣ ಪತ್ರ ಇತ್ಯಾದಿ ದಾಖಲೆಗಳನ್ನು ನಿರ್ಮಾಣಕ್ಕೆ ಅನುಮತಿ ಕೋರಿ ಸಲ್ಲಿಸುವ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

6) ಹೊಸ ದೋಣಿಯನ್ನು ಸಾಧ್ಯತಾ ಪತ್ರ ಪಡೆದ ಒಂದು ವರ್ಷದೊಳಗೆ ನಿರ್ಮಿಸಿ ನೋಂದಣಿ ಮಾಡತಕ್ಕದ್ದು.

7) ಸಾಧ್ಯತಾ ಪತ್ರ ಕೋರುವ ಅರ್ಜಿದಾರರು ಕನಿಷ್ಟ ಕಳೆದ 2 ವರ್ಷಗಳಿಂದ ಸದರಿ ದೋಣಿಯ ಮಾಲೀಕರಾಗಿರತಕ್ಕದ್ದು. ದೋಣಿಯನ್ನು ಖರೀದಿಸಿದ ನಂತರ ಅಪಘಾತ ಪ್ರಕರಣ ಹೊರತುಪಡಿಸಿ ಉಳಿದ ಕನಿಷ್ಟ 2 ವರ್ಷಗಳ ಅವಧಿಗೆ ಬದಲಿ ದೋಣಿ ನಿರ್ಮಿಸಲು ಸಾಧ್ಯತಾ ಪತ್ರ ನೀಡಲು ಕೋರುವಂತಿಲ್ಲ.

8) ದೋಣಿಯು ಕಳೆದ ಎರಡು ಮೀನುಗಾರಿಕಾ ಋತುಗಳಲ್ಲಿ ಮೀನುಗಾರಿಕೆ ನಡೆಸಿರಬೇಕು. ಈ ಬಗ್ಗೆ ಆಯಾ ವರ್ಷದ ಡೀಸೆಲ್ ಪಾಸ್ ಪುಸ್ತಕ / ಪರವಾನಗಿ ದಾಖಲೆಯನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

9) ಯಾಂತ್ರೀಕ ದೋಣಿಯನ್ನು ಪುನಃ ನಿರ್ಮಿಸಿ ನೋಂದಣಿಯಾದ ಐದು ವರ್ಷಗಳವರೆಗೆ ದೋಣಿಯನ್ನು ಮಾರಾಟ ಮಾಡತಕ್ಕದ್ದಲ್ಲ.

10) ಹೊಸದಾಗಿ ನಿರ್ಮಿಸುವ ದೋಣಿಯ ಗರಿಷ್ಟ ಉದ್ದ 24 ಮೀ. ಹಾಗೂ ಇಂಜಿನ್ ಅಶ್ವಶಕ್ತಿಯು ಗರಿಷ್ಟ 350 ಹೆಚ್.ಪಿ. ಇರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

1/5/16

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಸಂಬಂಧಪಟ್ಟ ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ
5) ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.